# ಬೆಳಗಾವಿ ಜಿಲ್ಲೆಯಲ್ಲಿ 1942ರ ಕ್ವಿಟ್ ಇಂಡಿಯಾ ಚಳುವಳಿ

**ತಿಪ್ಪಣ್ಣ ಧ. ಡಂಗಿ**

ಮುಖ್ಯಸ್ಥರು, ಇತಿಹಾಸ ವಿಭಾಗ, ಕೆ.ಎಲ್.ಇ ಸಂಸ್ಥೆಯ ಎಸ್.ಸಿ.ಪಿ. ಪದವಿ ಮಹಾವಿದ್ಯಾಲಯ, ಮಹಾಲಿಂಗಪುರ.

DOI: https://doi.org/10.5281/zenodo.17411666

## ABSTRACT:

1942 ರಲ್ಲಿ ದ್ವಿತೀಯ ವಿಶ್ವ ಮಹಾಯುದ್ಧವು ಒಳ್ಳೆ ಜೋರಾಗಿ ಇಂಗ್ಲೆಂಡ್ ಬಿಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡಿತ್ತು. ಅದರಿಂದ ಭಾರತದ ಸ್ವಾತಂತ್ರ್ಯ ಪ್ರೇಮಿಗಳಿಗೆ ಇದೊಂದು ಒಳ್ಳೆಯ ಅವಕಾಶವಾಗಿತ್ತು. ಯುದ್ಧದ ಕಾರಣ ವಸ್ತುಗಳ ಬೆಲೆ ಬಹಳ ಹೆಚ್ಚಾಗಿದ್ದವು, ಅಲ್ಲದೆ ಅನೇಕ ವಸ್ತುಗಳು ಪೇಟೆಯಲ್ಲಿ ಸಿಗುತ್ತಿರಲಿಲ್ಲ. ಬ್ರಿಟಿಷರು ಸಿಂಗಾಪುರ, ಮಲಯಾ ಮೊದಲಾದ ದೇಶಗಳಿಂದ ಹಿಂದೆ ಸರಿಯುತ್ತಿದ್ದರು. ಈ ಸುದ್ದಿ ತಿಳಿದ ಭಾರತೀಯರು ಆ ವರ್ಷ ವಸಾಹತುಶಾಹಿಯಿಂದ ಬಂಧಮುಕ್ತವಾಗಲು ಅಂದರೆ ಭಾರತದಿಂದ ಬ್ರಿಟೀಷರನ್ನು ಓಡಿಸಲು ಪಣ ತೊಟ್ಟರು. ಕ್ರಿಪ್ಸನ ಸಲಹೆಗಳು ವಿಫಲವಾದವು. ಮುಸ್ಲಿಂ ಲೀಗ್ ಪ್ರತ್ಯೇಕ ರಾಷ್ಟ್ರಕ್ಕೆ ಅಂಟಿಕೊಂಡಿತ್ತು. ಭಾರತದ ಮೇಲೆ ಜಪಾನಿಯರು ನುಗ್ಗಿ ಬರುತ್ತಿದ್ದರು. ಈ ಹಿನ್ನಲೆಯಲ್ಲಿ ಕ್ವಿಟ್ ಇಂಡಿಯಾ ಠರಾವನ್ನು ಅಂಗೀಕರಿಸಲಾಯಿತು. 1942ರ ಜುಲೈ 14 ರಂದು ವಾರ್ದಾದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಗಾಂಧೀಜಿಯ ಸಲಹೆಯಂತೆ "ಭಾರತ ಬಿಟ್ಟು ತೊಲಗಿ" ಎಂಬ ನಿರ್ಣಯವನ್ನು ಅಂಗೀಕರಿಸಿ ಬ್ರಿಟಿಷರಿಗೆ ರಾಜಕೀಯ ಒಪ್ಪಂದಕ್ಕೆ ಬರಲು 24 ದಿನಗಳ ಅಂತಿಮ ಗಡುವು ನೀಡಿತು, ಇದಕ್ಕೆ ಬ್ರಿಟಿಷರು ಯಾವುದೇ ಪ್ರತಿಕ್ರಿಯೆ ಕೊಡಲಿಲ್ಲ. ಆದಕಾರಣ 1942ರ ಆಗಸ್ಟ್ 8ರಂದು ಮುಂಬೈನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ "ಮಾಡು ಇಲ್ಲವೆ ಮಡಿ" ಎಂಬ ಧ್ಯೇಯದೊಂದಿಗೆ ಹೋರಾಟದ ಕಿಚ್ಚನ್ನು ಹಚ್ಚಲಾಯಿತು. ಈ ಒಂದು ಧ್ಯೇಯ ವಾಕ್ಯ ಇಡೀ ಭಾರತದಲ್ಲಿ ಹೊಸ ಸಂಚಲನವನ್ನು ಮೂಡಿಸಿತು. ಈ ಅಧಿವೇಶನಕ್ಕೆ ಬೆಳಗಾವಿಯಿಂದ ಗಂಗಾದರರಾವ್ ದೇಶಪಾಂಡೆ, ಪುಂಡಲೀಕಜಿ ಕಾತಗಾಡೆ, ರಾಮಚಂದ್ರ ವಡವಿ, ಚನ್ನಪ್ಪ ವಾಲಿ, ಅಪ್ಪಣ್ಣಗೌಡ ಪಾಟೀಲ್, ಅಣ್ಣೂ ಗುರೂಜಿ, ಶ್ರೀರಂಗ ಕಾಮತ, ಹೂಲಿ ವೆಂಕಟರೆಡ್ಡಿ ಮುಂತಾದ ನಾಯಕರು ಹೋದರು. ಮರುದಿನ ಅಂದರೆ ಆಗಸ್ಟ್ 9 ರಂದು ಗಾಂಧೀಜಿ, ನೆಹರು ಹಾಗೂ ಇತರ ಪ್ರಮುಖ ನಾಯಕರ ಬಂಧನವಾಯಿತು. ಈ ಸುದ್ದಿ ಇಡೀ ದೇಶದಲ್ಲೆಡೆ ಕಾಡ್ಗಿಚ್ಚಿನಂತೆ ಪಸರಿಸಿತು. ಕರ್ನಾಟಕವೂ ಇದರಿಂದ ಹೊರತಾಗಿರಲಿಲ್ಲ. ರಾಜ್ಯದ ನಾನಾ ಕಡೆ ಜಿಲ್ಲಾ, ತಾಲೂಕು ಹಾಗೂ ಗ್ರಾಮಗಳ ಮಟ್ಟದಲ್ಲಿ ಹೋರಾಟದ ರೂಪರೇಷೆಗಳು ಸಿದ್ಧಗೊಂಡವು.

## KEYWORDS:

ಮಾಡು ಇಲ್ಲವೆ ಮಡಿ, ಬೆಳಗಾವಿ, ಬಹಿಷ್ಕಾರ, ಸತ್ಯಾಗ್ರಹ, ಚಳುವಳಿ, ಕ್ರಾಂತಿ, ರಾಷ್ಟ್ರ ಧ್ವಜ.

**ಪರಿಚಯ:**

ಬೆಳಗಾವಿ ಜಿಲ್ಲೆಯಲ್ಲಿಯೂ ಸಹ 1942 ರ ಕ್ವಿಟ್ ಇಂಡಿಯಾ ಚಳುವಳಿಯು ತೀವ್ರ ಸ್ವರೂಪವನ್ನು ಪಡೆದುಕೊಂಡಿತು. 'ಚಲೇಜಾವ್' ಚಳುವಳಿ ಪ್ರಾರಂಭವಾಗುವ ಮೊದಲೇ ಬೆಳಗಾವಿಯಲ್ಲಿ ಆಗಸ್ಟ್5 ರಂದು ಅಣ್ಣೂ ಗುರೂಜಿಯವರ ನೇತೃತ್ವದಲ್ಲಿ ಪೂರ್ವಭಾವಿ ಸಭೆ ಸೇರಿದ ಕಾಂಗ್ರೆಸ್ ನಾಯಕರು, ಆಗಸ್ಟ್ 8 ರ ಮುಂಬೈ ಅಧಿವೇಶನದಲ್ಲಿ ಯಾರು ಕೂಡ ಭಾಗವಹಿಸದಿರುವುದು ಹಾಗೂ ಅಂದು ಯಾರೂ ಸಹ ಮನೆಯಲ್ಲಿರಬಾರದೆಂದು ನಿರ್ಣಯಕ್ಕೆ ಬರಲಾಯಿತು. ಏಕೆಂದರೆ, ಆಗಸ್ಟ್ 8 ಮುಂಬೈ ಕಾಂಗ್ರೆಸ್‌ನ ನಿರ್ಣಯವಾದ ಬಳಿಕ ಪ್ರಮುಖ ಕಾಂಗ್ರೆಸ್ ನಾಯಕರ ಬಂಧನವಾಗುವುದು ನಿಶ್ಚಿತವೆಂದು ತೀರ್ಮಾನಿಸಲಾಯಿತು. ಆ ರೀತಿಯಾಗಿ ಬೆಳಗಾವಿಯ ಬಹುತೇಕ ಕಾಂಗ್ರೆಸ್ ಕಾರ್ಯಕರ್ತರು ಬಂಧನಕ್ಕೊಳಗಾಗದೆ ಕೂಡಲೇ ತಲೆಮರೆಸಿಕೊಂಡರು.

ಗಾಂಧೀಜಿಯವರ ಬಂಧನದ ಸುದ್ದಿ ಹರಡುತ್ತಿದ್ದಂತೆ ಬೆಳಗಾವಿಯಲ್ಲಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು. ತಿಳಕವಾಡಿಯಲ್ಲಿ ನಡೆದ ಒಂದು ಸಾರ್ವಜನಿಕ ಸಮಾರಂಭದಲ್ಲಿ ಭಾಗವಹಿಸಿದ ಕೆಲ ವಿದ್ಯಾರ್ಥಿ ನಾಯಕರ ಬಂಧನವಾಯಿತು. ಇದೇ ರೀತಿಯಾದ ಒಂದು ಸಭೆಯನ್ನು ಮಾರುತಿ ಮಂದಿರದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ದಯಾನಂದ ಅರಳೀಕಟ್ಟಿ ಎಂಬುವವರನ್ನು ಬಂಧಿಸಲಾಯಿತು. ಆ ಗುಂಪನ್ನು ಚದುರಿಸಲು ಪೋಲೀಸರು ಲಾಠಿ ಚಾರ್ಜನ್ನು ಮಾಡಿದರು. ಅಲ್ಲಲ್ಲಿ ಹರತಾಳಗಳು ನಡೆದವು. ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಲಾಯಿತು. ಈ ಜಿಲ್ಲೆಯ ಎಲ್ಲ ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿ ಸಭೆಮೆರವಣಿಗೆಗಳು ಸಾಮಾನ್ಯವಾದವು. ಮುಂಬೈಯಿಂದ ಹಿಂದಿರುಗುತ್ತಿದ್ದ ಕರ್ನಾಟಕದ ಗಂಗಾಧರರಾವ್ ದೇಶಪಾಂಡೆಯವರನ್ನು ಆಗಸ್ಟ್ 15 ರಂದು ಬಂಧಿಸಲಾಯಿತು. ಅಂದೇ ಮೆರವಣಿಗೆಯ ವೇಳೆ ಕಡವಿ ಶಿವಾಪುರದ ಯುವಕ ಸಾತಪ್ಪ ಟೋಪಣ್ಣವರ ಎಂಬ ಯುವಕ ಪೋಲೀಸರ ಗುಂಡಿಗೆ ಬಲಿಯಾದನು. ಈತ ಕರ್ನಾಟಕದಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯ ಮೊದಲ ಹುತಾತ್ಮ. ಅದೇ ರೀತಿಯಾಗಿ ಬೈಲಹೊಂಗಲದಲ್ಲಿ ಸಹ ಪೋಲೀಸರ ಗುಂಡಿಗೆ ಹಲವು ಜನ ಬಲಿಯಾದರು. ಇತರರು ತಲೆಮರೆಸಿಕೊಂಡರು. ಈ ಜಿಲ್ಲೆಯ ಎಲ್ಲ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ವಾರಂಟುಗಳನ್ನು ಜಾರಿಮಾಡಲಾಗಿದ್ದಿತು. ಆಗಸ್ಟ್ ಕೊನೆಯ ವೇಳೆಗೆ ಗುಪ್ತ ಸಂಘಟನೆಗಳು ತಮ್ಮ ಕಾರ್ಯವನ್ನು ತೀವ್ರಗೊಳಿಸಿದವು. ಸುಮಾರು 16 ಗುಪ್ತ ಸಂಘಟನೆಯ ತಂಡಗಳನ್ನು ಅಣ್ಣೂ ಗುರೂಜಿಯವರು ರಚಿಸಿದರು. ಅವುಗಳಲ್ಲಿ ಪಾಶ್ಚಾಪುರ, ಹುದಲಿ, ಬೆಳಗಾವಿ, ಸಂಪಗಾವಿಹಿರೆಬಾಗೇವಾಡಿ, ಕಿತ್ತೂರುತಿಗಡೊಳ್ಳಿ, ಬೆಳವಡಿ, ಸಂಕೇಶ್ವರ, ನಿಪ್ಪಾಣಿ, ಬೇಡ್ಕಿಹಾಳ, ಹೊಸೂರಮುರಗೋಡ, ಹೂಲಿಮನೊಳ್ಳಿ, ಕಟಕೋಳ, ನಂದಗಡ, ರಾಯಭಾಗ, ಅಥಣಿಸತ್ತಿ ಮುಂತಾದ ಕಡೆ ಕಾರ್ಯಪ್ರವೃತ್ತವಾದವು. ಇದರ ಜೊತೆಗೆ ಗಂದಿಗವಾಡದ ಗಂಗಾಧರ ದೊಡಮನಿಯವರು ತಮ್ಮದೇ ಆದ ಯುವ ಪಡೆಯನ್ನು ಹೊಂದಿ ಹೋರಾಟದಲ್ಲಿ ಭಾಗವಹಿಸಿದರು.

ಈ ಹೋರಾಟದಲ್ಲಿ ಗಾಂಧೀಜಿಯವರ ಕಟ್ಟಾ ಶಿಷ್ಯರಾದ ಕಿಶೋರಿಲಾಲ ಜಿ. ಮಶ್ರುವಾಲಾ ಹಾಗೂ ಕಾಕಾ ಕಾಲೇಲಕರರು ಹರಿಜನ ವಾರಪತ್ರಿಕೆಯಲ್ಲಿ ನೀಡಿದ ಹೋರಾಟದ ರೂಪರೇಷೆಗಳನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು. ಎಲ್ಲರೂ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಬೇಕು, ಅಂಚೆ, ಪೋಲೀಸ್, ರೈಲ್ವೆ ಸ್ಟೇಷನ್‌ಗಳನ್ನು ನಾಶಪಡಿಸುವುದು, ವಿದೇಶಿ ವಸ್ತುಗಳ ಬಹಿಷ್ಕಾರ, ಕರ ನಿರಾಕರಣ, ಅಧ್ಯಾಪಕರು ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ತೊರೆಯುವುದು, ಕಾರ್ಮಿಕರು ಮುಷ್ಕರ ಹೂಡುವುದು, ವಕೀಲರು

ಕೋರ್ಟುಗಳನ್ನು ತೊರೆಯುವುದು, ತಂತಿ ಕತ್ತರಿಸುವುದು, ಸೇತುವೆ ಕೆಡಹುವುದು ಮೊದಲಾದ ವಿಧ್ವಂಸಕ ಕೆಲಸ ಮಾಡಬಹುದಾಗಿತ್ತು. ಆದರೆ ಯಾವುದೇ ವ್ಯಕ್ತಿಯ ಖಾಸಗಿ ಅಥವಾ ವೈಯಕ್ತಿಕ ಆಸ್ತಿಗೆ ಧಕ್ಕೆ ಮಾಡದೆ ಕೇವಲ ಸರ್ಕಾರಿ ಆಸ್ತಿಪಾಸ್ತಿಗಳನ್ನು ಮಾತ್ರ ಧ್ವಂಸ ಮಾಡಬಹುದಿತ್ತು.

ಈ ಹಿನ್ನಲೆಯಲ್ಲಿ ಪಂತ ಬಾಳೆಕುಂದ್ರಿಯಲ್ಲಿ ಮೊದಲ ಭೂಗತ ಸಭೆಯನ್ನು ನಡೆಸಲಾಯಿತು. ಅಲ್ಲಿ ಮುಂದಿನ ರೂಪರೇಷೆಗಳನ್ನು ಮಾಡಿಕೋಳ್ಳಲಾಯಿತು. ಸುಲಧಾಳ, ರಾಯಬಾಗ, ದೇಸೂರ, ಗುಂಜಿ ಹಾಗೂ ಸುಳೇಭಾವಿ ರೈಲ್ವೇ ಸ್ಟೇಷನ್ನುಗಳಿಗೆ ಬೆಂಕಿ ಹಚ್ಚಲಾಯಿತು. ಸುಳೇಭಾವಿಯಲ್ಲಿ ಕರ್ತವ್ಯನಿರತ ಪೋಲೀಸರ ಬಂದೂಕುಗಳನ್ನು ಕಸಿಯಲಾಯಿತು. ಇದರ ಜೊತೆ ಜೊತೆಯಲ್ಲಿಯೇ ಗ್ರಾಮ ಚಾವಡಿಗಳನ್ನು ಸುಡುವುದು, ಶಾಲಾ ಕಟ್ಟಡ, ವಿಶ್ರಾಂತಿ ಗೃಹಗಳು, ಅಂಚೆ ಕಛೇರಿಗಳನ್ನು ಧ್ವಂಸಗೊಳಿಸಲಾಯಿತು. ಅಲ್ಲದೇ ಅಂಚೆ ಸಿಬ್ಬಂದಿಯಿಂದ ಅಂಚೆ ಚೀಲಗಳನ್ನು ಕಸಿಯಲಾಯಿತು. ಮನೊಳಿಯಲ್ಲಿ ಅಂಚೆ ಚೀಲಗಳನ್ನು ಕಾಯುತ್ತಿದ್ದ ನಾಲ್ಕು ಪೋಲೀಸ್ ಸಿಬ್ಬಂದಿಯಿಂದ ಬಂಧೂಕುಗಳನ್ನು ಕಸಿದುಕೊಳ್ಳಲಾಯಿತು. ಮೀರಜ್‌ನಿಂದ ಹರಿಹರದವರೆಗಿನ ಎಲ್ಲ ಟೆಲಿಗ್ರಾಫ್ ಮಾರ್ಗಗಳನ್ನು ಕಡಿದು ಹಾಕಲಾಯಿತು.

ಬೆಳಗಾವಿಯಲ್ಲಿ ಒಂದು ಗುಪ್ತ ಕೇಂದ್ರ ಕಚೇರಿ ಆರಂಭಿಸಿ ಅದರ ಮಾರ್ಗದರ್ಶನದಂತೆ ಎಲ್ಲ ಗುಂಪುಗಳಿಗೂ ಧನಸಹಾಯ, ಸಲಕರಣೆಗಳ ಸಹಾಯ ಹಾಗೂ ಕಾರ್ಯಕ್ರಮಗಳನ್ನು ಕಳುಹಿಸಲಾಗುತ್ತಿತ್ತು. ಸೆಪ್ಟೆಂಬರ್ 15 ರಂದೇ ಒಂದೇ ದಿನದಲ್ಲಿ 4 ರೈಲ್ವೆ ಸ್ಟೇಶನ್ನುಗಳನ್ನು ಸುಡಲಾಯಿತು. ಕೇಂದ್ರೀಯ ಸಮಿತಿಯಿಂದ ಈ ಕಾರ್ಯಕ್ರಮ ಕೇವಲ ಎರಡೇ ದಿನ ಮೊದಲು ತಿಳಿಯಿತು. ಆಗ ಅಷ್ಟು ಕಡಿಮೆ ಅವಧಿಯಲ್ಲಿ ಹಣ ಸಂಗ್ರಹ ಮಾಡುವುದು ಸಾಧ್ಯವಿರಲಿಲ್ಲ. ಆದ್ದರಿಂದ ಜಿಲ್ಲಾ ಸಮಿತಿಯ ಸದಸ್ಯರಾದ ಜಯದೇವರಾವ ಕುಲಕರ್ಣಿಯವರು ತಮ್ಮ ಪತ್ನಿಯ ಆಭರಣಗಳನ್ನು ಬ್ಯಾಂಕಿನಲ್ಲಿ ಒತ್ತೆ ಇಟ್ಟು ಹಣ ತಂದರು. ಜಿಲ್ಲೆಯ ಎಲ್ಲ ಕಡೆ ಟೆಲಿಫೋನ್ ತಂತಿಯನ್ನು ಕಡಿಯುವುದು, ಟಪಾಲನ್ನು ಲೂಟಿಮಾಡಿ ಹಣವನ್ನು ಸಂಗ್ರಹಿಸುವುದು, ರೈಲ್ವೇ ಹಳಿಯನ್ನು ಕಿತ್ತುಹಾಕುವುದು, ಚಾವಡಿ, ಪೋಸ್ಟ್ ಆಫೀಸ್ ಹಾಗೂ ಸರ್ಕಾರಿ ಕಾರ್ಯಾಲಯಗಳನ್ನು ಸುಡುವುದು ಹಾಗೂ ಶಿಂದಿ ಸೆರೆ ಅಂಗಡಿಗಳನ್ನು ನಾಶಮಾಡುವಂತಹ ಚಟುವಟಿಕೆಗಳಲ್ಲಿ ತೊಡಗಲಾಯಿತು. ಬೆಳಗಾವಿ ಜಿಲ್ಲೆಯಲ್ಲಿ ಇಡೀ ಮುಂಬೈ ಪ್ರಾಂತದಲ್ಲಷ್ಟೇ ಅಲ್ಲದೇ ಇಡೀ ದೇಶದಲ್ಲಿಯೇ ಒಂದು ಮಾದರಿ ಹೋರಾಟವನ್ನು ಸಂಘಟಿಸಲಾಯಿತು. ಈ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಸಂಘಟನಾತ್ಮಕ ಹೋರಾಟ, ಶಿಸ್ತು, ಅರ್ಪಣಾ ಮನೋಭಾವ ಎಲ್ಲರಿಗೂ ಮಾದರಿಯಾಗುವಂತಿತ್ತು. ಜಿಲ್ಲೆಯ ಭೂಗತ ಸಂಘಟನೆಯ ಜವಾಬ್ದಾರಿಯನ್ನು ವಾಮನರಾವ್ ಬಿದರಿಯವರಿಗೆ ನೀಡಲಾಗಿತ್ತು. ಕೇಂದ್ರ ಕಚೇರಿಯ ಜವಾಬ್ದಾರಿಯನ್ನು ಜಯದೇವರಾವ ಕುಲಕರ್ಣಿಯವರು ನೋಡಿಕೊಳ್ಳುತ್ತಿದ್ದರು. ಪ್ರತಿಯೊಬ್ಬ ಹೋರಾಟಗಾರನಿಗೆ ವೈಯಕ್ತಿಕ ಖರ್ಚಿಗಾಗಿ 8 ರಿಂದ 12 ರೂ. ವರೆಗೆ ನೀಡಲಾಗುತ್ತಿತ್ತು. ತದನಂತರ ಜಿಲ್ಲಾ ಮಟ್ಟದ ಹೋರಾಟದ ರೂಪ ರೇಷೆಗಳು ಬೇರೆ ಬೇರೆ ಪ್ರದೇಶಗಳಿಗೂ ಹರಡಿತು.

ಬೆಳಗಾವಿ ಜಿಲ್ಲೆಯ ಹೋರಾಟದ ಕಿಚ್ಚು ಬ್ರಿಟೀಷರಿಗೆ ನುಂಗಲಾರದ ತುತ್ತಾಯಿತು. ಆದ್ದರಿಂದ ಕೆಲವು ಪ್ರಮುಖ ನಾಯಕರ ಮಾಹಿತಿ ನೀಡುವವರಿಗೆ ಬಹುಮಾನವನ್ನು ಘೋಷಿಸಲಾಯಿತು. ಅವರಲ್ಲಿ ಚನ್ನಪ್ಪ ವಾಲಿ, ಶ್ರೀರಂಗ ಕಾಮತ, ಅಣ್ಣೂ ಗುರೂಜಿ (ರಾಮಚಂದ್ರ ವಡವಿ) ಇವರ ಬಗ್ಗೆ ಸುಳಿವು ನೀಡಿದವರಿಗೆ 5000 ರೂ. ಗಳನ್ನು

ಬಹುಮಾನವಾಗಿ ಘೋಷಿಸಲಾಯಿತು. ಇದರ ಜೊತೆಗೆ ವಾಮನರಾವ್ ಬಿದರಿ, ಅಪ್ಪಣ್ಣ ಗೌಡ ಪಾಟೀಲ್, ಏ.ಎಸ್.ಕುಲಕರ್ಣಿ ಹಾಗೂ ಚಿನ್ಮಯಸ್ವಾಮಿ ಓಂಕಾರನಾಥರ ತಲೆಗೆ 2000 ರೂ. ಗಳನ್ನು ಕಟ್ಟಲಾಯಿತು. ಇದೇ ರೀತಿಯಾಗಿ ಇತರ ನಾಯಕರ ಬಂಧನಕ್ಕೆ ಭಿನ್ನ ಭಿನ್ನವಾದ ಬಹುಮಾನಗಳನ್ನು ಘೋಷಿಸಲಾಯಿತು.

ಇವುಗಳ ಜೊತೆಗೆ ಕಂದಾಯ ಸಂಗ್ರಹಣೆಯಲ್ಲಿಯೂ ಹೋರಾಟಗಾರರು ತೊಡಗಿದರು. 2030 ಜನರ ಗುಂಪು ಇಂತಹ ಕಾರ್ಯದಲ್ಲಿ ತೊಡಗಿತು. 20011943 ರಂದು ಖಾನಪುರ ತಾಲೂಕಿನ ತೊಲಗಿಯಲ್ಲಿ ಕಂದಾಯ ಅಧಿಕಾರಿಗಳಿಂದ 2000 ರೂ. ಗಳನ್ನು ಕಸಿದುಕೊಳ್ಳಲಾಯಿತು. ಅಂದೇ ಬೆಳಗಾವಿಗೆ ಭೇಟಿ ನೀಡಿದ್ದ ಮುಂಬೈನ ಗವರ್ನರ ರೋಜರ ರುಮ್ಲೆ, ಬೆಳಗಾವಿ ಜಿಲ್ಲೆಯಲ್ಲಿ ಕಾಂಗ್ರೆಸ್ ಫಂಡಿನ ಆಧಾರದ ಮೇಲೆ ಅತ್ಯಧಿಕ ಗ್ಯಾಂಗ್‌ಗಳು ಇವೆ, ಎಂದು ಹೇಳಿದನು. ಅಂದರೆ ಇಲ್ಲಿನ ಪೋಲೀಸರ ಅಸಮರ್ಥತೆ ಹಾಗೂ ಜಿಲ್ಲೆಯ ಹೋರಾಟಗಾರರ ಪ್ರಾಬಲ್ಯವನ್ನು ಅರಿಯಬಹುದಾಗಿದೆ.

1942ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ನಡೆದ ಪ್ರಮುಖ ಘಟನೆಗಳಲ್ಲಿ ಒಂದು ಸುಲದಾಳ ರೈಲ್ವೆ ಸ್ಟೇಷನನ್ನು ಸುಟ್ಟದ್ದು. ಈ ಚಳುವಳಿ ಎಷ್ಟು ತೀವ್ರ ಸ್ವರೂಪ ಪಡೆದುಕೊಂಡಿತೆಂದರೆ ಬೆಳಗಾವಿಯಿಂದ ಗೋಕಾಕದವರೆಗಿನ ರೈಲ್ವೆ ಲೈನನ್ನು ಅಪಾಯ ವಲಯ ( ಡೇಂಜರ್ ಜೋನ್) ಎಂದು ಸಾರಲಾಗಿತ್ತು. ಪ್ರತಿ ರೈಲಿನ ಮುಂದೆ ಒಂದು ಪೈಲಟ್ ಗಾಡಿ ಓಡಿಸಲಾಗುತ್ತಿತ್ತು. ಸರ್ಕಾರ ಹೋರಾಟದ ಸ್ವರೂಪ ನೋಡಿ ಕಂಗೆಟ್ಟಿತು. ಇಡೀ ಮುಂಬೈ ಪ್ರಾಂತ್ಯದಲ್ಲಿ ಕ್ರಾಂತಿಕಾರಿ ಹೋರಾಟಕ್ಕೆ ಬೆಳಗಾವಿಗೆ ಪ್ರಥಮ ಸ್ಥಾನವಿತ್ತು. ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲದೆ ತಾಲೂಕು ಮಟ್ಟದಲ್ಲಿ ಕೂಡ ಸ್ವಾತಂತ್ರ್ಯದ ಕಿಚ್ಚು ಕಾಣತೊಡಗಿತು.

ಖಾನಾಪುರ ತಾಲೂಕಿನ ಗಂದಿಗವಾಡ ಪ್ರಮುಖಕೇಂದ್ರವಾಗಿತ್ತು. ಇಲ್ಲಿನ ಗುಂಪುಗಳು ಇಟಗಿ, ಪಾರೀಶ್ವಾಡ, ಎಮ್.ಕೆ.ಹುಬ್ಬಳ್ಳಿಗಳಲ್ಲಿ ಕಾರ್ಯಪ್ರವೃತ್ತವಾಗಿದ್ದವು. ಇವರು ತಾಲೂಕಿನಾದ್ಯಂತ ಪಿಕೆಟಿಂಗ್‌ನಂತಹ ಚಟುವಟಿಕೆಗಳು ನಡೆದವು.

ಚಿಕ್ಕೋಡಿಯಲ್ಲಿ ಬಸವಪ್ರಭು ಶಿವಲಿಂಗಪ್ಪ ಕೋರೆಯವರು ಈ ಭಾಗದ ದೊಡ್ಡ ರೈತರೂ ಹಾಗೂ ವ್ಯಾಪಾರಿಗಳೂ ಆಗಿದ್ದರು. ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಅವರು ಗಂಗಾಧರರಾವ ದೇಶಪಾಂಡೆಯವರೊಂದಿಗೆ ಉತ್ತಮ ಬಾಂಧವ್ಯ ಹೊಂದಿ ಚಳುವಳಿಗಾರರಿಗೆ ಧನಸಹಾಯ ಹಾಗೂ ಕಾರ್ಯಕ್ರಮಗಳಿಗೆ ಜನರನ್ನು ಒದಗಿಸುವ ಕಾರ್ಯದಲ್ಲಿ ತೊಡಗಿದ್ದರು. ರಾಯಬಾಗದ ಬ್ಯಾಕೂಡ ಗುಡ್ಡದ ತೋಟದಲ್ಲಿ ಅಡಗಿ ಐದಾರು ತಿಂಗಳು ಭೂಗತರಾಗಿದ್ದುಕೊಂಡೇ, ಇತರ ಭೂಗತರಿಗೆ ಆಶ್ರಯವನ್ನು ನೀಡುತ್ತಿದ್ದರು. ಇದೇ ಕಾರಣಕ್ಕೆ ಬಸವಪ್ರಭು ಕೋರೆಯವರನ್ನು ಕಿಲ್ಲೆಯಲ್ಲಿ ಸ್ಥಾನಬದ್ಧತೆಯಲ್ಲಿಡಲಾಗಿತ್ತು. ಮಂಜರಿಯ ಅಪ್ಪಾಸಾಹೇಬ್ ಪಾಟೀಲ್ ದಂಪತಿಗಳೂ ಚಳುವಳಿಯಲ್ಲಿ ಭಾಗವಹಿಸಿದ್ದರು. ರಾವಪ್ಪ ಭೋಣಿ ಎಂಬುವವರು ಹಾಗೂ ಇತರರು ಸೇರಿ ಉದಗಾಂವ್ ಸ್ಟೇಷನ ಬಳಿ ಮಧ್ಯಾಹ್ನ 12 ಗಂಟೆಗೆ ರೈಲ್ವೆ ಗಾಡಿ ತಡೆದು ಅದರಲ್ಲಿಯ ಸರ್ಕಾರಿ ಹಣ ಲೂಟಿ ಮಾಡಿದ್ದರು. ಚಿಕ್ಕೋಡಿ ತಾಲೂಕಿನ ನಿಪ್ಪಾಣಿ, ಅಕ್ಕೋಳ ಹಾಗೂ ಬೇಡ್ಕಿಹಾಳ ಭಾಗಗಳಲ್ಲಿ ಚಳುವಳಿ ಜೋರಾಗಿಯೇ ನಡೆಯಿತು. ರಾಮಭಾವು ಕಾಗವಾಡ, ಗಣಪತ ಲಾಲ ಶಹಾ ಎಂಬಿಬ್ಬರು ಮುಖಂಡರನ್ನು ಮೋಸದಿಂದ ಬಂಧಿಸಲಾಯಿತು. ಇದರಿಂದ ತಾಲೂಕಿನಾದ್ಯಾಂತ ಭಾರೀ ಪ್ರತಿಭಟನೆಗಳು ಜರುಗಿದವು. ಪೋಲೀಸರಿಂದ ಗೋಳೀಬಾರು ನಡೆದು ಶಂಕರ ಪಾಂಗಿರೆ ಎಂಬ ತರುಣ

ತನ್ನ ಕೈಯಲ್ಲಿದ್ದ ರಾಷ್ಟ್ರಧ್ವಜವನ್ನು ಇನ್ನೊಬ್ಬನ ಕೈಗೆ ದಾಟಿಸಿ ನೆಲಕ್ಕುರುಳಿ ಹುತಾತ್ಮನಾದ. ಈ ಘಟನೆಯಲ್ಲಿ ಅನೇಕ ಸರ್ಕಾರಿ ಕಚೇರಿ, ಅಂಚೆ ಚಾವಡಿ, ಅಂಚೆ ಕಛೇರಿಗಳು ನಾಶವಾದವು. 17081942 ರಂದು ಮಿಲಿಟರಿ ಪೊಲೀಸರು ಬಂದು ನಿಪ್ಪಾಣಿ ನಗರವನ್ನು ತಮ್ಮ ವಶಕ್ಕೆ ತೆಗೆದುಕೊಂಡು ದಬ್ಬಾಳಿಕೆ ನಡೆಸಿದರು. ನೂರಾರು ಜನರನ್ನು ಬಂಧಿಸಿದರು. 49 ಜನರ ವಿರುದ್ಧ ಖಟ್ಲೆ ಹಾಕಲಾಯಿತು. 36 ಜನರಿಗೆ ಶಿಕ್ಷೆಯಾಯಿತು. ನಿಪ್ಪಾಣಿ ನಗರದ ಮೇಲೆ 1 ಲಕ್ಷ ರೂ. ಸಾಮುದಾಯಿಕ ದಂಡ ವಿಧಿಸಿದರು. ಇದು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಜಿಲ್ಲೆಯಲ್ಲಿಯೇ ಅತೀ ಮುಖ್ಯವಾದ ಘಟನೆಗಳಲ್ಲೊಂದು. ತಾಲೂಕಿನ ಕಾಪಶಿ ಜಹಗೀರಿನ ಗಾರಗೋಟಿ ಕಚೇರಿಯ ಖಜಾನೆ ಲೂಟಿಯ ವಿಫಲ ಪ್ರಯತ್ನ ನಡೆದು ಪೋಲೀಸರ ಗುಂಡಿಗೆ ಕರವೀರಸ್ವಾಮಿ ಸಹಿತ ಆರು ಜನರು ಬಲಿಯಾದರು. ಅಲ್ಲದೆ ಕೊಲ್ಲಾಪುರದ ಕಾಲೇಜು ವಿದ್ಯಾರ್ಥಿನಿಯರಾದ ಚೌಧರಿ ಮತ್ತು ವಿಜಾಪುರೆ ಎಂಬಿಬ್ಬರು ಚಿಕ್ಕೋಡಿ ತಾಲೂಕಿನಲ್ಲಿ ಪ್ರಚಾರ ಕೈಗೊಂಡಿದ್ದು ವಿಶೇಷ. ನಂತರ ಬಂಧಿಸಿ ಅವರಿಗೆ 6 ತಿಂಗಳು ಶಿಕ್ಷೆ ನೀಡಲಾಯಿತು.

ಈ ಹೋರಾಟದಲ್ಲಿ ಅಥಣಿ ತಾಲೂಕು ಕೂಡಾ ಹಿಂದೆ ಬಿದ್ದಿರಲಿಲ್ಲ. ಟಿಳಕರು ಇಲ್ಲಿಗೆ ಭೇಟಿ ನೀಡಿದ ನಂತರ ಅವರಿಂದ ಪ್ರೇರೇಪಿತರಾಗಿ ಹಲವಾರು ಜನ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಸತ್ತಿಯ ಅನಂತ ಕುಲಕರ್ಣಿ, ಪ್ರಹ್ಲಾದ ಕುಲಕರ್ಣಿ, ಧರ್ಮರಾವ ಕುಲಕರ್ಣಿ, ಅಥಣಿಯ ಎನ್.ಬಿ.ದಳವಾಯಿ, ಮಂಗಸೂಳಿಯ ಶಿವರಾಯ ಕೋಷ್ಠಿ, ಜಿ.ಡಿ.ಪಾಟೀಲ್, ಗಣೇಶವಾಡಿಯ ಶಂಕರ ದಾತೆ, ಶ್ರೀಪಾದರಾವ ಮರಾಠೆ, ದಾಮೋದರ ಜೋಶಿ ಮುಂತಾದವರೆಲ್ಲ ಭೂಗತವಾಗಿ ಕಾರ್ಯನಿರ್ವಹಿಸತೊಡಗಿದರು. ಸತ್ತಿ ಗ್ರಾಮದಲ್ಲಿ ಕ್ರಾಂತಿ ಸೇನೆ ರಚನೆಯಾಯಿತು. ಖಾಕಿ ಸಮವಸ್ತ್ರ ಧರಿಸಿ ಹೋರಾಟಗಾರರು ಕಾರ್ಯನಿರ್ವಹಿಸಿದರು. ಹಿಡಕಲ್ಲದ 14 ಹೋರಾಟಗಾರರರನ್ನು 1942ರ ಸೆಪ್ಟೆಂಬರ್‌ನಲ್ಲಿ ಪೋಲೀಸರು ಬಂಧಿಸಿದರು. ಅವರ ಬಳಿ ಇದ್ದ ಪಿಸ್ತೂಲು, ತಂತಿ ಕತ್ತರಿಸುವ ಕರಗತಗಳೆಲ್ಲ ದೊರೆತಿರುವುದರಿಂದ ಅವರ ಮೇಲೆ ಖಟ್ಲೆ ನಡೆದು ವಿವಿಧ ಅವಧಿಯ ಶಿಕ್ಷೆಗಳಾದವು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬೈಲಹೊಂಗಲ ತಾಲೂಕು ಮುಂಚೂಣಿಯಲ್ಲಿತ್ತೆಂದು ಹೇಳಬಹುದಾಗಿದೆ. 1942ರ ಆಗಸ್ಟ್ 17 ರಂದು ಬೈಲಹೊಂಗಲದ ಕೆಲವರನ್ನು ಬಂಧಿಸಿ ಒಯ್ಯುತ್ತಿದ್ದಾಗ ಅದಕ್ಕೆ ಅಡ್ಡಿ ಪಡಿಸಿದ ಜನರನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದ್ದರಿಂದ 7 ಜನ ಸ್ಥಳದಲ್ಲೇ ಪ್ರಾಣತೆತ್ತರು. ಸಂಪಗಾವಿಯ ಚೆನ್ನಪ್ಪ ವಾಲಿಯವರು ಹೋರಾಟಗಾರರ ಗುಂಪು ಕಟ್ಟಿಕೊಂಡು ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದರು. 1942ರಲ್ಲಿ ಒಂದು ರಾತ್ರಿ 810 ಜನ ಹೋರಾಟಗಾರರು, ಗಸ್ತು ತಿರುಗುವ ಪೋಲೀಸರ ರೈಫಲ್ಲುಗಳನ್ನೇ ಕಸಿದುಕೊಂಡಿದ್ದರು. ಗಂಡು ಮಕ್ಕಳಿಗೆ ಸೀರೆ ಉಡಿಸಿ, ಸ್ಮಶಾನ ಯಾತ್ರೆಗೆ ಹೊರಟವರಂತೆ ನಟಿಸುತ್ತ ನಾಟಕೀಯ ರೀತಿಯಲ್ಲಿ ಈ ಕಾರ್ಯಕ್ರಮ ನಡೆಸಲಾಯಿತು. ಪಾರಿಶ್ವಾಡದ ಗೌಡರ ಮನೆಯಲ್ಲಿ ಇಟ್ಟಿದ್ದ ಏಳೆಂಟು ಹಳ್ಳಿಗಳ ದಫ್ತರ್‌ಗಳನ್ನು ಅವರ ಮನೆಗೆ ನುಗ್ಗಿ ಸುಟ್ಟು ಹಾಕಿ ಸಾಹಸ ಮೆರೆಯಲಾಯಿತು. ಎಮ.ಕೆ. ಹುಬ್ಬಳ್ಳಿಯ ಗದ್ದೆಕೆರೆ ದಂಡೆಯ ಮೇಲೆ ವಿಶ್ರಾಂತಿ ಬಂಗಲೆಯ ಮೇಲೂ ದಾಳಿ ನಡೆಸಿ ಸುಟ್ಟು ಹಾಕಿದ ಘಟನೆ ಬ್ರಿಟಿಶರನ್ನು ಬೆಚ್ಚಿ ಬೀಳಿಸಿತು. ಈ ತಂಡದ ಪ್ರಮುಖರಾದ ಓಂಕಾರಮಠರಿಗೆ 'ಬೆಂಕಿಸ್ವಾಮಿ'ಯೆಂದೇ ಕರೆಯತೊಡಗಿದರಲ್ಲದೇ ಅವರನ್ನು ಹಿಡಿದು ಕೊಟ್ಟವರಿಗೆ 2000 ರೂ.ಗಳನ್ನು ಬಹುಮಾನವಾಗಿ ಘೋಷಿಸಲಾಗಿತ್ತು. 1943ರ

ಫೆಬ್ರುವರಿಯಲ್ಲಿ ತಿಗಡೊಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಡಿ.ಎಸ್ಪಿ. ಥಾರ್ನಹಿಲ್‌ನ ಜೀಪಿಗೆ ಬಸರಕೋಡ ಗ್ರಾಮದಲ್ಲಿ ಬೆಂಕಿಹಚ್ಚಲಾಯಿತು.

ಈಗಾಗಲೇ ಹೇಳಿರುವಂತೆ ಸವದತ್ತಿ ತಾಲೂಕಿನಾದ್ಯಂತ ಕ್ವಿಟ್ ಇಂಡಿಯಾ ಚಳುವಳಿಯ ಹೋರಾಟಗಳು ನಡೆದವು. ತಾಲೂಕಿನ ಕಡಬಿಶಿವಾಪುರ ಗ್ರಾಮದಲ್ಲಿ ಆಗಸ್ಟ್ 8ರಂದು ಧ್ವಜ ಹಾರಿಸಿದಾಗ ಆ ಗ್ರಾಮದ ಜನರ ಮೇಲೆ ಪೋಲೀಸರು ಗುಂಡು ಹಾರಿಸಿದರು. ರಾಷ್ಟ್ರ ಧ್ವಜ ಕಿತ್ತು ಹೋಗಿದ್ದರಿಂದ ಸಾತಪ್ಪ ಟೋಪಣ್ಣವರ ಎಂಬ ಯುವಕ ಪ್ರತಿಭಟಿಸಿ ಪೋಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮನಾದ ಘಟನೆ ಅವಿಸ್ಮರಣೀಯ. ತಾಲೂಕಿನ ಹರ್ಲಾಪುರ ರೈಲ್ವೆಸ್ಟೇಷನ್‌ಗೆ ಬೆಂಕಿ ಹಚ್ಚಲಾಯಿತು. ಈ ಘಟನೆಯಲ್ಲಿ ಆ ಸ್ಟೇಷನ್ನಿನ ಮಾಸ್ತರರ ಮನೆಗೂ ಬೆಂಕಿ ತಗುಲಿದಾಗ ಅವರ ಹೆಂಡತಿ ಗಾಬರಿಯಾಗಿ ಓಡಿ ಮನೆಯಿಂದ ಹೊರಬಂದಳು. ಮನೆಯೊಳಗೇ ಇದ್ದ ಅವರ ಚಿಕ್ಕ ಮಗುವನ್ನು ಬೆಂಕಿಹಚ್ಚಿದ ಜನರೇ ರಕ್ಷಿಸಿದ್ದು ಹಾಗೂ ಆಭರಣ ವಸ್ತುಗಳನ್ನು ಅವರಿಗೆ ಹಿಂದುರಿಗಿಸಿದ್ದು ಹೋರಾಟಗಾರರ ಮಾನವೀಯತೆಯ ಉದಾಹರಣೆಯನ್ನಬಹುದು. ಹೊಸೂರಿನಲ್ಲಿ ದಾದಾ ಕಾಳೇಯವರ ಮಾರ್ಗದರ್ಶನದಲ್ಲಿ ಹೋರಾಟಗಳು ನಡೆದವು. ಹೊಸೂರಿನ ಗ್ರಾಮದ ಜನರ ಮೇಲೆ ಪೋಲೀಸರು 5000 ಸಾವಿರ ರೂ.ಗಳನ್ನು ದಂಡಗಂದಾಯ ಹೇರಿದರು. ಹೀಗೆ ತಾಲೂಕಿನಾದ್ಯಂತ ಇಂತಹ ಹಲವಾರು ವಿಧ್ವಂಸಕ ಕೃತ್ಯಗಳನ್ನು ನಡೆಸಿದ ಬೇರೆ ಬೇರೆ ತಂಡಗಳು ಬ್ರಿಟೀಷರಿಗೆ ಉಪಟಳವಾದರು. ಸವದತ್ತಿ ಪರಿಸರದಲ್ಲಿ ಹೋರಾಟ ಎಷ್ಟು ತೀವ್ರವಾಗಿತ್ತೆಂದರೆ ಬ್ರಿಟೀಷರು ಗುರ್ಲಹೊಸೂರಿನಲ್ಲಿ ಒಂದು ಮಿಲಿಟರಿ ಠಾಣೆ ಸ್ಥಾಪಿಸುವ ನಿರ್ಣಯಕ್ಕೆ ಬಂದರು.

ಗೋಕಾಕ ತಾಲುಕಿನಲ್ಲಿ ನಡೆದ ಹೋರಾಟವೂ ಕೂಡ ಅವಿಸ್ಮರಣೀಯವಾದದ್ದು. ಗೋಕಾಕದ ತಾಲೂಕು ಕಛೇರಿಯ ಮೇಲೆ ದಾಳಿ ಮಾಡಿದಾಗ ಮಹಿಳೆಯರೇ ಪ್ರಮುಖ ಪಾತ್ರ ವಹಿಸಿದ್ದರು. ಕಚೇರಿಯ ಪ್ರಮುಖ ದಾಖಲೆಗಳನ್ನು ಹರಿದು ಹಾಕಿ ತಮ್ಮ ಸಾಹಸ ಮೆರೆದರು. ಅಕ್ಕತಂಗೇರಹಾಳದಲ್ಲಿ ವಾಮನರಾವ ಬಿದರಿ ಹಾಗೂ ಪಾಶ್ಚಾಪುರ ಭಾಗದಲ್ಲಿ ಅಣ್ಣೂ ಗುರೂಜಿ ಪ್ರಾಮುಖ ಪಾತ್ರ ವಹಿಸಿದರು. ಪಾಶ್ಚಾಪುರ ಭಾಗವನ್ನು ಅಪಾಯಕಾರಿ ವಲಯವೆಂದೇ ಪರಿಗಣಿಸಲಾಗಿತ್ತು. ಈ ಪರಿಸರದಲ್ಲಿ ಅಣ್ಣೂಗುರೂಜಿ, ವಾಮನರಾವ ಬಿದರಿ, ಅಣ್ಣೂ ದೇಶಪಾಂಡೆ, ವಿಷ್ಣು ಕುಲಕರ್ಣಿ, ವಿಠ್ಠಲರಾವ ಕುಲಕರ್ಣಿ ಮುಂತಾದವರು ಹೋರಾಟ ನಡೆಸಿದರು. ಪಾಶ್ಚಾಪುರ ಗ್ರಾಮದ ಕುಲಕರ್ಣಿಯವರ ಮನೆಯಲ್ಲಿ ಸುತ್ತಲಿನ ಏಳೆಂಟು ಗ್ರಾಮದ ದಫ್ತರಗಳನ್ನು ಇಟ್ಟಿರುವುದು ಗೊತ್ತಾದಾಗ ಕ್ರಾಂತಿಕಾರರು ಅವುಗಳನ್ನು ಸುಟ್ಟರು. ಅಲ್ಲದೇ ತಾಲೂಕಿನಾದ್ಯಂತ ರೈಲು ಮಾರ್ಗಗಳನ್ನು ಸುಡುವುದು, ಸರ್ಕಾರಿ ಕಾಗದಗಳನ್ನು ಧ್ವಂಸ ಮಾಡುವಂತಹ ಕಾರ್ಯಗಳು ಸರ್ವೇ ಸಾಮಾನ್ಯವಾಗಿದ್ದವು. ಅವುಗಳಲ್ಲಿ ಸುಳೇಭಾವಿ ಸ್ಟೇಶನನ ದಹನ ಒಂದು ನಾಟಕೀಯ ಘಟನೆಯಂತಿತ್ತು.

ಇದೇ ರೀತಿಯಾದ ಕ್ರಾಂತಿಕಾರಿ ಚಟುವಟಿಕೆಗಳು ರಾಮದುರ್ಗ ತಾಲೂಕಿನ ಹುಲಕುಂದ, ಕಟಕೋಳ ಮತ್ತು ಹೊಸಕೋಟಿಗಳಲ್ಲಿ ನಡೆದವು. ಕಟಕೋಳ ಕಛೇರಿಗೆ ಬೆಂಕಿ ಹಚ್ಚಿದ್ದು, ಚಂದರಗಿ ಸರ್ಕಾರಿ ಬಂಗ್ಲೆ ಸುಟ್ಟಿದ್ದು, ರಾಮದುರ್ಗ ಟಪಾಲು ಬಸ್ಸು ತಡೆದು, ಟಪಾಲ ಕಸಿದುಕೊಂಡಿದ್ದು, ಭಂಡಾರಹಳ್ಳಿ ಹಪ್ತೆ ಲೂಟಿ ಮಾಡಿದ್ದು, ಗೊಡಚಿ ಅಂಚೆ ಕಚೇರಿಗೆ ಬೆಂಕಿ ಇಟ್ಟದ್ದು ಈ ಭಾಗದ ಪ್ರಮುಖ ಕಾರ್ಯಗಳೆನಿಸಿವೆ. ಈ ಕಾರ್ಯದಲ್ಲಿ ಭಾಗವಹಿಸಿದ ಕೆಲವರಿಗೆ 2 ರಿಂದ 2 1/2 ವರ್ಷ ಶಿಕ್ಷೆ ಯಾಯಿತು. ಶ್ರೀಮತಿ ರುದ್ರವ್ವ ವಿರತಮಠ ಇವರಿಗೆ ಬಹಿರಂಗ ಕಾಯಿದೆ ಭಂಗಕ್ಕಾಗಿ 6 ತಿಂಗಳು ಶಿಕ್ಷೆ ಯಾಯಿತು.

ಕೊಲ್ಲಾಪುರ ಸಂಸ್ಥಾನದಲ್ಲಿದ್ದ ರಾಯಭಾಗ ಪ್ರದೇಶದಲ್ಲಿ ಕೂಡ ಹಲವಾರು ಕ್ರಾಂತಿಕಾರಿ ಚಟುವಟಿಕೆಗಳು ನಡೆದವು.

ಹೀಗೆ 1942ರಲ್ಲಿ ಹೋರಾಟಗಳು ಜಿಲ್ಲೆಯಾದ್ಯಂತ ಭರದಿಂದ ನಡೆದು ಬ್ರಿಟಿಷರ ಸಾಮ್ರಾಜ್ಯಶಾಹಿಗೆ ಎಚ್ಚರಿಕೆಯನ್ನು ಕೊಡುವಂತಾಯಿತು. ಆದರೆ ಹೋರಾಟದ ಮುಂಚೂಣಿಯಲ್ಲಿದ್ದ ಪ್ರಮುಖ ನಾಯಕರನ್ನು ಪಿತೂರಿ ಮಾಡುವ ಮೂಲಕ ಬಂಧಿಸಲಾಯಿತೆಂಬುದೇ ದುರಂತದ ಸಂಗತಿಯಾಗಿದೆ. ಅಗ್ರ ಹೋರಾಟಗಾರರಾದ ಶ್ರೀರಂಗ ಕಾಮತ ಹಾಗೂ ಜಯದೇವ ಕುಲಕರ್ಣಿಯವರನ್ನು ವಿಶ್ವಾಸಘಾತದಿಂದ ಬಂಧಿಸಲಾಯಿತು. ಖೇಲಕರಭಾಗದ ಶ್ರೀನಿವಾಸ ರಂಗೋಕುಲಕರ್ಣಿ ಎಂಬುವವರ ಮನೆಯಲ್ಲಿ 21/02/1943 ರಂದು ಮುಂದಿನ ಕಾರ್ಯಕ್ರಮಗಳ ಕುರಿತು ಚರ್ಚಿಸಲು ಸಭೆ ಸೇರಿದ್ದರು. ಆಗ ಬಡಸ ಗ್ರಾಮದ ಒಬ್ಬ ಪರಿಚಿತರೇ ಪೋಲೀಸರಿಗೆ ಸುದ್ದಿ ಮುಟ್ಟಿಸಿ, ಬಂಧಿಸಲು ಸಹಾಯ ಮಾಡಿದರು. ಅದೇ ರೀತಿಯಾಗಿ ಅಣ್ಣೂ ಗುರೂಜಿಯವರನ್ನು ಬಿಜಾಪುರದ ಚಾಂದಬಾವಡಿಯ ಹತ್ತಿರ ಸಹ ಪರಿಚಿತರ ಒಳಸಂಚಿನಿಂದ ಬಂಧಿಸಲಾಯಿತು. ಚೆನ್ನಪ್ಪ ವಾಲಿಯವರನ್ನು ಬೆಂಗಳೂರಿನಲ್ಲಿ ಬಂಧಿಸಿ ಬೆಳಗಾವಿಯ ಕ್ಯಾಂಪ್ ಜೈಲಿಗೆ ಹಾಕಲಾಯಿತು. ವಡವಿ ಮಾಸ್ತರರ ಬಂಧನಕ್ಕೆ ಶಂಕರ ಕಣಗಲಿ ಕಾರಣರಾದನು. ಆದರೆ ವಾಮನರಾವ ಬಿದರಿಯವರು ಮಾತ್ರ ಕೊನೆಯತನಕ ಯಾರ ಕೈಗೂ ಸಿಗದೇ 1994ರ ಆಗಸ್ಟ್ 9 ರಂದು ಗಾಂಧೀಜಿಯವರ ಆದೇಶದಂತೆ ತಾವೇ ಪ್ರತ್ಯಕ್ಷರಾಗಿ ಬಂಧನಕ್ಕೊಳಗಾದರು.

**ಉಪಸಂಹಾರ:**

ಹೀಗೆ ಜಿಲ್ಲೆಯಾದ್ಯಂತ 1942 ಕ್ವಿಟ್ ಇಂಡಿಯಾ ಚಳುವಳಿಯು ವಿವಿಧ ಹಂತದಲ್ಲಿ ಹಾಗೂ ವಿವಿಧ ಸ್ವರೂಪದಲ್ಲಿ ನಡೆದು ಗಾಂಧೀಜಿಯವರು ನೀಡಿದ ಕರೆ 'ಮಾಡು ಇಲ್ಲವೆ ಮಡಿ' ಅಥವಾ 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' ಹೋರಾಟಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಜಿಲ್ಲೆಯ ಜನ, ಅದರಲ್ಲಿಯೂ ಮಹಿಳೆಯರು, ಶಾಲಾಕಾಲೇಜು ವಿದ್ಯಾರ್ಥಿಗಳು, ಕಾರ್ಮಿಕರು, ರೈತರು, ವ್ಯಾಪಾರಸ್ಥರು ಹಾಗೂ ಇತರರು ತಮ್ಮ ಅಭೂತಪೂರ್ವ ಸೇವೆಯಿಂದ ರಾಷ್ಟ್ರ ಮಟ್ಟದಲ್ಲಿ ಗಮನಸೆಳೆದರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ಚಳುವಳಿಯು ಭಾರತಕ್ಕೆ ಸ್ವಾತಂತ್ರ್ಯದ ದಿನಗಳನ್ನು ಸಮೀಪಿಸಿತು. ಭಾರತದಲ್ಲಿ ಬಹಳ ಕಾಲ ಆಳ್ವಿಕೆಯನ್ನು ಉಳಿಸಿಕೊಳ್ಳಲಾಗದು ಎಂಬ ಅರಿವು ಬ್ರಿಟಿಷರಿಗಾಯಿತು. ಅದು ಸ್ವರಾಜ್ಯದ ಮಹತ್ವ ತಿಳಿಸಿತು. ಸಮಾಜದ ಎಲ್ಲ ವರ್ಗಗಳನ್ನು ರಾಷ್ಟ್ರೀಯ ಪ್ರವಾಹವಾಹಿನಿಯಲ್ಲಿ ಹರಿದು ಬಿಟ್ಟಿತು. ಅದು ವಿದೇಶಗಳಲ್ಲಿ ಭಾರತದ ಬಗ್ಗೆ ಸದಭಿಪ್ರಾಯ ಮೂಡಿಸಿತು. ಡಾ॥ ಈಶ್ವರಿ ಪ್ರಸಾದರು "ಈ ಚಳುವಳಿಯನ್ನು ಫ್ರಾನ್ಸಿನ ಬ್ಯಾಸ್ಟೆಲ್ ಪತನಕ್ಕೂ, ರಷ್ಯಾದ ಅಕ್ಟೋಬರ ಕ್ರಾಂತಿಗೂ ಹೋಲಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ಕೆ.ಎನ್. ಅಶ್ವತಪ್ಪ – ಸಮಗ್ರ ಭಾರತದ ಇತಿಹಾಸ ಸಂಪುಟ2, ಸುಭಾಸ ಸ್ಟೋರ್ಸ್ ಪಬ್ಲಿಷರ್ಸ್ 2007 ಪುಟ 1698,1701.
2. ಬೆಳಗಾವಿ ಸಿರಿ, ಸ್ಮರಣ ಸಂಚಿಕೆ, 70ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, 2003 ಪುಟ113.
3. ಸೂರ್ಯನಾಥ ಕಾಮತ, ಬೆಳಗಾವಿ ಡಿಸ್ಟ್ರಿಕ್ಟ್ ಗ್ಯಾಜೆಟೀಯರ್, 1987, ಬೆಂಗಳೂರು, ಪುಟ151, 152, 153, 154, 155.
4. ಸೋಮಲಿಂಗ ಅ. ಮಳಗಲಿ ಹಾಗೂ ಅಚ್ಯುತ ರಾ.ವಡವಿ (ಲೇ), ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಮತ್ತು ಗಾಂಧೀಜಿ, ಬೆಳಗಾವಿ, 2010, ಪುಟ 250.
5. ಸಚಿತ್ರ ಭಾರತ, ಪುಟ250, 251, 252.
6. ಎಲ್.ಎಸ್.ಶಾಸ್ತ್ರೀ (ಲೇ), ಸ್ವಾತಂತ್ರ್ಯ ಸಂಗ್ರಾಮ, ಬೆಳಗಾವಿ, 2006, ಪುಟ108, 109, 110, 115, 116, 118, 120, 136, 137.
7. ಚ ಸರೋಜಿನಿ ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಮೂರುಸಾವಿರಮಠ ಹುಬ್ಬಳಿ. ಪುಟ339,340.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.